(*b*) whether Government intends to upgrade (i) Gundlupet—Chamarajanagar road (ii) Biligere Rangana Hills road (iii) Chamarajanagar—T. Narsipur Road (iv) Hardanahalli—Arkalvadi—Yaraganahalli road (v) Kavalande—Yelandur—Kollegal Road; and (vi) Veeranapura-Harave and Heggavadi Road and classify them as State Highways and allot funds as per rules;

(*c*) whether Government intends to upgrade Nanjanagud—Hassarur Ghat road and classify it as National Highway and allot funds as per rules?

Sri K. LAKKAPPA (Minister for Public Works).—

(*a*) Not for the present.

(*b*) Not for the present.

(*c*) No.

ಶ್ರೀ ಎಸ್. ಪುಟ್ಟಸ್ವಾಮಿ.—ನಾನು ಪ್ರಶ್ನೆಯಲ್ಲಿ ತಿಳಿಸಿರುವ ರಸ್ತೆಗಳಲ್ಲಿ ಕೆಲವು ಒಂದು ತಾಲ್ಲೂಕು ಹೆಡ್‌ಕ್ವಾರ್ಟರಿನಿಂದ ಇನ್ನೊಂದು ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಹೋಗುತ್ತವೆ, ಇನ್ನು ಕೆಲವು ಒಂದು ರಾಜ್ಯದ ಎಲ್ಲೆಯಿಂದ ಇನ್ನೊಂದು ರಾಜ್ಯದ ಎಲ್ಲೆಯವರೆಗೆ ಹೋಗುತ್ತವೆ ಆದುದರಿಂದ ಇವುಗಳ ಪ್ರಾಮುಖ್ಯತೆ ಬಹಳವಾಗಿರುವುದರಿಂದ ಆದಷ್ಟು ಜಾಗ್ರತೆಯಾಗಿ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳುವುದು ನಿಜ. ರಸ್ತೆಗಳು ಎಲ್ಲಿಂದ ಎಲ್ಲಿಗೆ ಹೋಗುತ್ತವೆ, ಮತ್ತು ಎಷ್ಟು ವಾಹನಗಳು ಅವುಗಳಮೇರೆ ಸಂಚಾರಮಾಡುತ್ತವೆ ಮುಂತಾದ್ದೆಲ್ಲವನ್ನೂ ಗಮನಿಸಿ ಅನೇಕ ಕ್ಯಾಟಗರಿ ರಸ್ತೆಗಳನ್ನು ಮಾಡಿದ್ದೇವೆ. ಈಗಿರುವ ಕ್ಯಾಟಗರಿಯಿಂದ ಬೇರೆ ಕ್ಯಾಟಗರಿಗೆ ಬದಲಾಯಿಸಲು ಹಣಕಾಸಿನ ಸೌಲಭ್ಯವಿಲ್ಲದಿರುವುದು ಒಂದು ಕಾರಣ, ಮತ್ತು ಪ್ರಯಾಣ ಮಾಡುವವರು ಹೆಚ್ಚಾಗಿಲ್ಲದಿರುವುದು ಇನ್ನೊಂದು ಕಾರಣ. ಈ ಎರಡು ಕಾರಣಗಳಿಂದ ನದ್ಯಕ್ಕೆ ಅಪ್‌ಗ್ರೇಡ್ ಮಾಡುವ ಪರಿಸ್ಥಿತಿಯಲ್ಲಿಲ್ಲ.

Industrial Dispute regarding termination of Deccan Herald and Prajavani Employees

324. Sri M. S. KRISHNAN (Malleswaram).—

Will the Mister for Law, Labour and Parliamentary Affairs be pleased to state :—

(*a*) whther tb Banga'ore Newspaper Employees' Union had raised an industrial Dispute regarding the illegal termination of services of employees by the Management of 'Deccan Herald' and 'Prajavani' (*i.e.*, Printers (Mysore) P. Ltd., Bangalore);

(*b*) if so, when the Conciliation proceedings were initiated and when it concluded;

(*c*) when the final reports in respect of the dispute reached the Government;

(*d*) the further action taken by the Government to resolve the dispute?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) The report of failure of conciliation proceedings reached Government on 25th January, 1969.

(*c*) The final report reached Government on 3rd February, 1969.

(*d*) The dispute has been referred for adjudication to the Industrial Tribunal, Bangalore.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಟ್ರಿಬ್ಯೂನಲ್‌ಗೆ ಯಾವಾಗ ಹಾಕಲಾಯಿತು, ತಾರೀಖನ್ನು ತಿಳಿಸುವುದಕ್ಕೆ ಆಗುತ್ತದೆಯೇ ?

† Sri K. PUTTASWAMY.—It was referred on 14-8-1969.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ಯಾವಾಗಲೂ ಸಹ ಯಾವುದಾದರೂ ಒಂದು ಕೈಗಾರಿಕಾ ವಿವಾದ ಬಂದರೆ ಅದನ್ನು ಲೇಬರ್ ಕಮಿಷನರು ಮತ್ತು ಲಾ ಸೆಕ್ರೆಟರಿ ಅವರಿಬ್ಬರೂ ಸಹ ರೆಫರ್ ಮಾಡಬಹುದು ಎಂದರೆ ಮಾಡತಕ್ಕ ಒಂದು ಪದ್ಧತಿ ಮತ್ತು ಪ್ರತೀತಿ ಉಂಟೇ ?

Sri K. PUTTASWAMY.—That is an internal matter. There are certain matters on which the Secretary may take decision and there are certain other matters on which the Secretary will have to consult the Minister.

Road work of Holenarasipur-Keralapur Road

356. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether it has come to the notice of Government that the road work of Holenarasipur-Keralapur road is pending for the last seventeen years ;

(*b*) the amount required to complete the same ;

(*c*) whether the Government intends to take steps to sanction necessary funds to complete the said road work ?

Sri K. LAKKAPPA (Minister for Public Works).—

(*a*) Formation of a major portion of the road and construction of some of Cross Drainage works have been done.

(*b*) Rs. 5.40 lakhs.

(*c*) This will be considered subject to the availabilty of funds.

ಶ್ರೀ ಎಚ್. ಡಿ. ದೇವೇಗೌಡ.—'ಸಿ' ಗೆ ಉತ್ತರವಾಗಿ ಸರ್ಕಾರದ ಹಣದ ಒಂದು ಪರಿಸ್ಥಿತಿಯನ್ನು ಅವಲಂಬಿಸಿದೆ ಎಂದು ಹೇಳಿದ್ದೀರಿ. ಎಷ್ಟೋ ವರ್ಷದಿಂದ ಈ ರಸ್ತೆಯನ್ನು ಮುಗಿಸುವುದಕ್ಕೆ ತಡವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ ? ಇದು ಎರಡು ತಾಲ್ಲೂಕುಗಳಿಗೆ ಕನೆಕ್ಟನ್ ಕೊಡುವ ರಸ್ತೆ, ಅತಿ ಮುಖ್ಯವಾದ ರಸ್ತೆ ಎಂದಾದರೂ ತಮ್ಮ ಗಮನಕ್ಕೆ ಬಂದಿಲ್ಲವೇ ? ಇನ್ನು ಎಷ್ಟು ವರ್ಷದಲ್ಲಿ ಪೂರೈಸುತ್ತೀರಿ ?